DECEMBER 2022 **U/ID 30703/ULC1A**

Time : Three hours Maximum : 75 marks

PART A — (10 × 2 = 20 marks)

I. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಹತ್ತಕ್ಕೆ ಸಂಕ್ಷಿಪ್ತವಾಗಿ ಉತ್ತರಿಸಿ. ಉತ್ತರದ ಮಿತಿ 30 ಪದಗಳು.

1. ಇಂದ್ರನು ಅರ್ಜುನನ ಮುಂದೆ ಯಾವ ರೂಪದಲ್ಲಿ ಕಾಣಿಸಿಕೊಂಡನು?

2. ಶಿವನು ಯಾವ ರೂಪದಲ್ಲಿ ತನ್ನನ್ನೂ, ತನ್ನ ಪರಿವಾರವನ್ನೂ ಬದಲಿಸಿಕೊಂಡು ಕಾಡನ್ನು ಮುತ್ತಿದನು?

3. ವೈಶಂಪಾಯನ ಸರೋವರವು ಹೇಗೆ ಕಾಣುತ್ತಿತ್ತು?

4. ಅಂಕಿತನಾಮಗಳು.

5. ಅಕ್ಕಮಹಾದೇವಿಯ ಚನ್ನಮಲ್ಲಿಕಾರ್ಜುನ ರೂಪವನ್ನು ಹೇಗೆ ವರ್ಣಿಸಿದ್ದಾಳೆ?

6. ಲೋಹಿತಾಶ್ವನ ಹೆಣವನ್ನು ಸುಡಲು ಅನುಮತಿ ನೀಡಲಾರೆನೆಂದು ಹರಿಶ್ಚಂದ್ರನು ಹೇಳಿದಾಗ ಚಂದ್ರಮತಿ ಏನೆಂದುಕೊಂಡಳು?

7. ತನ್ನ ಮನೆಗೆ ಬಂದ ಊರ್ವಶಿಯನ್ನು ಅರ್ಜುನನು ಹೇಗೆ ಸ್ವಾಗತಿಸಿದನು?

8. ಮಮಕಾರ ಭೂಪಾಲ ಯಾರು? ಅವನ ಗುಣಗಳನ್ನು ಪರಿಚಯಿಸಿ.

9. ರಾಮನು ಏನೆಂದು ಪ್ರಶ್ನಿಸಿದನು? ಅದಕ್ಕೆ ಗೌತಮ ಮಹರ್ಷಿ ಏನು ಹೇಳಿದನು?

10. ಚಂದ್ರಹಾಸನ ತಂದೆತಾಯಿಗಳು ಯಾರು?

11. ಮಗುವಿನ ಮೇಲಿನ ಮಮತೆ ಜನಪದ ಗೀತೆಯಲ್ಲಿ ಹೇಗೆ ವ್ಯಕ್ತವಾಗಿದೆ?

12. ಕುಮಾರವ್ಯಾಸ ಭಾರತ.

PART B — ($5 \times 5 = 25$ marks)

II. ಕೆಳಗಿನ ಪ್ರಶ್ನೆಗಳಿಗೆ ಸಂದರ್ಭದೊಂದಿಗೆ ಮತ್ತು ಯಾರು ಯಾರಿಗೆ ಹೇಳಿದರು ಎಂದು ಉತ್ತರಿಸಿ. ಉತ್ತರದ ಮಿತಿ 200 ಪದಗಳು.

13. 'ಇನ್ನಾವ ಶೈಲದೊಳಿರ್ಪೆವು ಇರ್ಪೆಡೆವೇಳಾ ನೀಂ ತ್ರಿಪುರಾಂತಕಾ'.

14. 'ಚತುರಂತ ಕ್ಷಿತಿಕಾಂತೆ ಕೇಳ್ ಜಲಧಿ ಕೇಳ್ ಸಪ್ತಾರ್ಚಿ ಕೇಳ್'.

15. 'ಕತ್ತೆ ಬಲ್ಲುದೆ ಕತ್ತುರಿಯ ವಾಸನೆಯ ತೊತ್ತು ಬಲ್ಲಳೆ ಗುರುಹಿರಿಯರುತ್ತಮರೆಂಬುದ'.

16. 'ನಾನಿದನೆಲ್ಲವ ಗಳಗಳನೆ ಕೊಯ್ದು ಕೊಂಡೊಯ್ದಿತ್ತಡೆ ಎನ್ನೊಡೆಯ ಮುಳಿಯದಿಹನ್'.

17. 'ತುರಗ ಮೇಧದ ರಾಜಸೂಯದ ವರ ಮಹಾಕ್ರತುಕಾರರೀಕೆಯ ಚರಣದುಂಗುಟ ತುದಿಯ ಕಾಂಬರೆ'.

18. 'ಮಾಯೆ ಮೆರೆದಳು ಬಾಲ ಲೀಲೆಯಲಿ'.

19. 'ಏನೆಲೋ ನರೆದಲೆಗ ನೀನು ಸಮಾನನೇ ಎನಗಿಲ್ಲಿ'

PART C — (3 × 10 = 30 marks)

III. ಕೆಳಗಿನವುಗಳಲ್ಲಿ ಮೂರು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ. ಉತ್ತರದ ಮಿತಿ 500 ಪದಗಳು.

20. ಶಿವ ಹಾಗೂ ಅರ್ಜುನನ ನಡುವೆ ನಡೆದ ಹೋರಾಟವನ್ನು ಪಂಪನು ಹೇಗೆ ವರ್ಣಿಸಿದ್ದಾನೆ?

21. 'ರಾಗಿ–ವ್ರೀಹಿ' ಯರ ನಡುವೆ ನಡೆದ ಸಂಭಾಷಣೆಯನ್ನು ವರ್ಣಿಸಿ.

22. 'ಕರುಬರಿದ್ದೂರಿಂದೆ ಕಾಡೊಳ್ಳಿತು' ಎಂದು ಕವಿ ಹೇಳಲು ಕಾರಣವೇನು?

23. 'ಗೋವಿನ ಹಾಡು' ಕವನದ ಕಥಾವಸ್ತುವನ್ನು ವಿವರಿಸಿ.

24. ದುರ್ಯೋಧನನ ವಧೆಯ ಪ್ರಸಂಗವನ್ನು ರನ್ನನು ಹೇಗೆ ಚಿತ್ರಿಸಿದ್ದಾನೆ? ವಿವರಿಸಿ.
